ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಬಲದಂಡೆ ಕಾಲುವೆ ಬದಲು ಎಡದಂಡೆ ಕಾಲುವೆ ಎಂದು ತಪ್ಪು ಬಿದ್ದಿದೆ. ಈಗ ಬಲದಂಡೆ ಕಾಲುವೆಗೆ ವಿವರಣೆ ಕೊಡುತ್ತೀರಾ

†ಶ್ರೀ ಡಿ. ದೇವರಾಜ್ ಅರಸ್.—ಎರಡ್ಕೂ ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ,—ಸ್ವಾಮಿ, ೧೯೭೭-೭೮ನೇ ಸಾಲಿನಲ್ಲಿ ರೈಟ್ ಬ್ಯಾಂಕ್ ಕೆನಾಲ್‌ಗೆ ಎಷ್ಟು ಹಣ ತಾವು ಇಟ್ಟಿದ್ದೀರಿ?

ಶ್ರೀ ಡಿ. ದೇವರಾಜ ಅರಸ್.—ಹಣ ಎಷ್ಟು ಎಂದು ಹೇಳಬೇಕಾದರೆ, ಆಂದಾಜು ೬ ಕೋಟಿ ರೂಪಾಯಿಗಳು.

ಶ್ರೀ ಎಂ. ಸಿ. ಬಸಪ್ಪ.—ಈಗ ೬ ಕೋಟಿ ರೂಪಾಯಿಗಳು ಅಂದರೆ, ಅದರಲ್ಲಿ ಫೈನಾನ್ಸಿಯಲ್ ಇಯರ್ ಎಂಡ್, ಅಂದರೆ ಮಾರ್ಚಿ ೩೧ಕ್ಕೆ ಖರ್ಚು ಆದಂತ ಹಣ ಎಷ್ಟು. ಉಳಿದ ಹಣ ಎಷ್ಟು?

ಶ್ರೀ ಡಿ. ದೇವರಾಜ ಅರಸ್.—ಅದರ ಬಗ್ಗೆ ತಮಗೆ ಬೇಕಾದರೆ ಅಂಕಿ ಅಂಶ ಕೊಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ತಾವು ವರ್ಷದಲ್ಲಿ ಏನು ಹಣ ಇಡುತ್ತೀರಾ ಅದನ್ನು ಪೂರ್ತಿ ಖರ್ಚು ಮಾಡದೆ, ಸ್ವಲ್ಪ ಸ್ವಲ್ಪ ಖರ್ಚು ಮಾಡಿ ರೈಟ್ ಬ್ಯಾಂಕ್ ಕೆನಾಲ್‌ಗೆ ಸರಿಯಾದ ರೀತಿಯಲ್ಲಿ ನೋಡಿಲ್ಲ.

ಶ್ರೀ ಡಿ. ದೇವರಾಜ್ ಅರಸ್ —ನಾನು ಅದರ ಬಗ್ಗೆ ನೋಡಿಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ,—ಈಗ ಲೆಫ್ಟ್‌ಬ್ಯಾಂಕ್ ಕೆನಾಲ್‌ಗೆ ೧೪-೧೫ ಲಕ್ಷ ರೂಪಾಯಿ ಇಟ್ಟು ಖರ್ಚು ಮಾಡಿದ್ದೀರಿ. ಈ ಕೆಲಸ ಪೂರ್ತಿ ಆಗಿದೆಯೇ?

ಶ್ರೀ ಡಿ. ದೇವರಾಜ್ ಅರಸ್.—೩ ಸಾವಿರ ಎಕರೆ ಆಗಿದೆ.

ಶ್ರೀ ಎಂ. ಸಿ. ಬಸಪ್ಪ.—ಇನ್ನು ಎಷ್ಟು ಆಗಬೇಕಾಗಿದೆ?

ಶ್ರೀ ಡಿ. ದೇವರಾಜ್ ಅರಸ್.—ಲೆಫ್ಟ್‌ಬ್ಯಾಂಕ್ ೧೬ ಮೈಲಿ ಇರಬಹುದು.

ಶ್ರೀ ಎಂ. ಸಿ. ಬಸಪ್ಪ.—ಈಗ ಅಲ್ಲಿ ಎಂಟೈರ್ ಆಯಕಟ್ಟು ಡೆವಲಪ್‌ಮೆಂಟ್ ಆಗಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ದೇವರಾಜ್ ಅರಸ್.—ರೋಡ್ಸ್, ಕೆಲವು ಫೀಕ್ ಚಾನಲ್ಸ್. ಕಂಪ್ಲೀಟ್ ಆಗುತ್ತಿವೆ.

Lift Irrigation from Kumdvati river

154. SRI K. YENKATAPPA (Shikaripur).—Will the Chief Minister be pleased to state :—

(*a*) whether a scheme has been prepared for supplying water to Talagunda and Ugani hoblies by Lift Irrigation from Kumdvati river (from madaga Tank);

(*b*) if not, whether Government would issue an order for preparing a scheme in this regard;

(*c*) whether Government is aware that those two hoblies are drought affected areas;

(*d*) if so, whether the said lift irrigation scheme would be completed early ?

SRI D. DEVARAJ URS (Chief Minister)

(*a*) No.

(*b*), (*c*) and (*d*) It is not possible to undertake this new scheme as there is scarcity of water in sub-reservoir of Tungabhadra.

ಶ್ರೀ ಕೆ. ಯೆಂಕಟಪ್ಪ.—ಸ್ವಾಮಿ, ಈ ತಳಗುಂದ, ಮತ್ತು ಉಡಗಣಿ ಈ ಎರಡು ಹೋಬಳಿಗಳು ಸತತವಾಗಿ ಬರಗಾಲಕ್ಕೆ ಸಿಕ್ಕಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈಗ ಕುಮದ್ವತಿ ನದಿಯಿಂದ (ಮದಗಕೆರೆಯಿಂದ) ಸಾಕಷ್ಟು ನೀರು ದೊರೆಯುತ್ತದೆ. ಆದುದರಿಂದ ಯಾತ ನೀರಾವರಿ ಯನ್ನು ತಳಗುಂದ ಮತ್ತು ಉಡಗಣಿ ಹೋಬಳಿಗಳಿಗೆ ನೀರನ್ನೊಯ್ಯಲು ಯೋಜನೆಯನ್ನು ಮಂಜೂರ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಈ ಎರಡು ಹೋಬಳಿಗಳು ಆಗಿಂದ್ದಾಗ್ಗೆ ಬರಗಾಲದ ತೊಂದರೆ ಗೊಳಗಾಗುತ್ತವೆ ಎನ್ನುವುದು ಗೊತ್ತಿದೆ. ಈಗ ಮಾನ್ಯ ಸದಸ್ಯರು ಸಾಕಷ್ಟು ನೀರು ಇದೆ ಎಂದು ಏನು ಹೇಳುತ್ತಿದ್ದಾರೆ ಅದು ಸರಿಯಲ್ಲ. ಇವೊತ್ತು ಧಾರವಾಡ ಜಿಲ್ಲೆಯ ಕೆಲವು ಭಾಗಕ್ಕೆ ನೀರನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಕಾಂಟೂರು ಇರಿಗೇಷನ್, ಲಿಫ್ಟ್ ಇರಿಗೇಷನ್ ಮಾಡಬೇಕು ಎಂದು ಕೇಳುತ್ತಾರೆ. ಇದಕ್ಕೂ ನೀರು ಕೊಟ್ಟು, ಬೇರೆಯ ಕೆಲಸಕ್ಕೆ ನೀರು ಕೊಡುವುದಕ್ಕೆ ನೀರು ಇಲ್ಲ. These are all governed by Krishna Award.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಎತ ನೀರಾವರಿ ಯೋಜನೆ ಸಮರ್ಪಕವಾಗಿ ಆಗುವುದಿಲ್ಲ ಎಂದು ಹೇಳುವುದಾದರೆ, ಸಾಮೂಹಿಕ ಕೊಳವೆ ಬಾವಿಗಳನ್ನು ಮಂಜೂರು ಮಾಡುವುದಕ್ಕೆ ಆಗಂತ್ತದೆಯೆ ?

ಶ್ರೀ ಡಿ. ದೇವರಾಜ ಅರಸ್.—ಇದು ಗಮನಾರ್ಹವಾದ ಸಲಹೆ ; ಭೂ ಗರ್ಭದಲ್ಲಿ ನೀರು ಇರುವುದನ್ನು ನೋಡಿಕೊಂಡು ; ಆ ಜನಗಳಿಗೆ ಯಾವ ತರಹ ಸಹಾಯ ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಬಿ. ಶಂಕರರಾವ್.—ಈ ಕೆರೆ ನೀರು ನನ್ನ ತಾಲ್ಲೂಕಿಗೆ ಬರುತ್ತದೆ.

ಅಧ್ಯಕ್ಷರು.—ತಾವು ಎಲ್ಲ ಸ್ಥಳೀಯ ಪ್ರಶ್ನೆಗಳಿಗೂ ಪ್ರವೇಶ ಮಾಡುತ್ತೀರಿ ?

ಶ್ರೀ ಜೆ. ಬಿ. ಶಂಕರರಾವ್.—ನನ್ನ ೨೦ ವರ್ಷದ ಅಸೆಂಬ್ಲಿ ಜೀವನದಲ್ಲಿ ಈ ರೀತಿ ನೋಡಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವು ಕೇಳುವುದಕ್ಕೆ ಯಾವ ಆಕ್ಷೇಪಣೆಯೂ ಇಲ್ಲ ಈಗಾಗಲೇ ನಾನು ಉತ್ತರ ಹೇಳಿದ್ದೇನೆ, ನಿಮ್ಮ ಹಕ್ಕು ಯಾವುದು ಮೊಟಕು ಆಗುವುದಿಲ್ಲ. ಆ ಕೆರೆಗಳನ್ನು ತೆಗೆದುಕೊಳ್ಳುವು ದಕ್ಕಾಗುವುದಿಲ್ಲ.

Tank works in Chitapur Taluk, Gulbarga District

247. SRI SHARANAPPA BHAIRY (Shahabad).—Will the Chief Minister be pleased to state.—

(*a*) the number of Tank works in Chitapur Taluk of Gulbarga District Surveyed in 1972-73 ;

(*b*) of them the number of survey Tank works sanctioned for construction ?

SRI D. DEVARAJ URS (Chief Minister).—

(*a*) One tank work is surveyed in 1972-1973.

(*b*) None.

ಶ್ರೀ ಶರಣಪ್ಪ ಭೈರಿ.—(ಅ) ಪ್ರಶ್ನೆಗೆ ಉತ್ತರವಾಗಿ ಒಂದು ಕೆರೆ ಎಂದು ಹೇಳಿದ್ದೀರಿ. ಇದರಲ್ಲಿ ಕೆರೆ ಹೆಸರು ಇಲ್ಲ, ಈ ಕೆರೆ ಅಲ್ಲದೆ, ಮೂರು ಕೆರೆ ಹೆಸರುಗಳನ್ನು ನಾನು ಬರೆದುಕೊಟ್ಟಿದ್ದೆ, ಆ ಮೂರು ಕೆರೆ ಹೆಸರುಗಳು ಇಲ್ಲ. ಅವುಗಳು ಸರ್ವೆ ಆಗಿದೆಯೇ ? ಎಷ್ಟರಮಟ್ಟಿಗೆ ಕೆಲಸ ಆಗಿದೆ ಎನ್ನುವುದನ್ನು ತಿಳಿಸುತ್ತೀರಾ ?